ಸ್ವಭಾವಕ್ಕೆ ಹೋಲುವ ಪಾತ್ರವೇ ಸಿಕ್ಕಿದೆಯಂತೆ.

‘ನಾನು ನೆನಪುಗಳಿಗೆ ತುಂಬ ಬೆಲೆ ಕೊಡುತ್ತೇನೆ. ಈ ಸಿನಿಮಾದ ಹುಡುಗಿಯೂ ಹಾಗೆ. ನೆನಪುಗಳಲ್ಲಿ ಕಳೆದುಹೋಗುವವಳು. ಹೃದಯದಿಂದ ಯೋಚಿಸುವವಳು. ಭಾವನೆಗಳಿಗೆ ಬೆಲೆ ಕೊಡುವವಳು. ಇಡೀ ಚಿತ್ರ ಕಾವ್ಯಾತ್ಮಕವಾಗಿದೆ. ಅಷ್ಟೇ ಅಲ್ಲ, ಇದೊಂದು ದೃಶ್ಯಕಾವ್ಯವೂ ಹೌದು. ಕಥೆ ತುಂಬ ಚೆನ್ನಾಗಿದೆ. ಹತ್ತು ವರ್ಷಗಳ ಅವಧಿಯಲ್ಲಿ ನಡೆಯುವ ಕಥನವಿದು. ವಿದ್ಯಾರ್ಥಿಯಾಗಿದ್ದಾಗಿನ ಉತ್ಸಾಹ, ನಂತರದ ದಿನಗಳಲ್ಲಿ ಬರುವ ಐಡೆಂಟಿಟಿ ಕ್ರೈಸಿಸ್, ನಾನು ಯಾರು? ಏನು ಆಗಬಲ್ಲೆ ಎಂಬಿತ್ಯಾದಿ ಮೂಲಭೂತ ಪ್ರಶ್ನೆಗಳು, ನಂತರದ ವೃತ್ತಿಬದುಕಿನ ಪ್ರಾರಂಭಿಕ ಸವಾಲುಗಳು ಎಲ್ಲವೂ ಈ ಸಿನಿಮಾದಲ್ಲಿವೆ. ಇದರ ಜೊತೆಗೇ ಮನುಷ್ಯನ ವೈಯಕ್ತಿಕ ಬದುಕಿನಲ್ಲಿ ಪ್ರೇಮದ ಪಾತ್ರ ಎಂಥದ್ದು ಎಂಬುದನ್ನೂ ಈ ಸಿನಿಮಾ ತುಂಬ ಚೆನ್ನಾಗಿ ಹೇಳುತ್ತದೆ. ಇದರಲ್ಲಿ ಎಮೋಷನ್ಸ್ ಇದೆ, ಮೆಲೊಡಿ ಇದೆ, ನಗು ಇದೆ –ಅಂಥ ಹಲವು ಫ್ಲೇವರ್‌ಗಳು ಸೇರಿದ ರುಚಿ ಇದೆ. ಹಾಗಾಗಿ ಎಲ್ಲ ರೀತಿಯ ಪ್ರೇಕ್ಷಕರನ್ನೂ ಇದು ಸೆಳೆಯುತ್ತದೆ’ ಎಂದು ವಿಶ್ವಾಸದಿಂದ ಹೇಳುತ್ತಾರೆ ಅಂಕಿತಾ.

ನಿರ್ದೇಶಕರು ಈ ಸಿನಿಮಾದಲ್ಲಿ ಎಲ್ಲ ಋತುಮಾನಗಳನ್ನೂ ತೋರಿಸುತ್ತಿದ್ದಾರಂತೆ. ಬೇಸಿಗೆಯ ಧಗೆ, ಚಳಿಯ ಬೆಚ್ಚನೆಯ ಭಾವ, ಮಳೆಗಾಲದ ಹಸಿತನ ಹೀಗೆ ನಿಸರ್ಗದ ಬದಲಾವಣೆಗಳನ್ನು ಬದುಕಿನ ಭಾವಗಳೊಂದಿಗೆ ಸೇರಿಸಿ ಹೆಣೆಯಲಾಗಿದೆಯಂತೆ. ಜೊತೆಗೆ ಸಾಕಷ್ಟು ಹೊಸತನವೂ ಇದೆಯಂತೆ.

‘ಹೊಸತನ ಎನ್ನುವುದು ಕಥೆಯಲ್ಲಿ ಮಾತ್ರವಲ್ಲ. ನಟವರ್ಗದಲ್ಲಿ, ತಾಂತ್ರಿಕ ತಂಡದಲ್ಲಿಯೂ ಹೊಸತನವನ್ನು ಹುಡುಕುವ ಪ್ರಯತ್ನವನ್ನು ನಿರ್ದೇಶಕರು ಮಾಡಿದ್ದಾರೆ. ಈ ಸಿನಿಮಾದ ಛಾಯಾಗ್ರಾಹಕ ಶ್ರೀವತ್ಸನ್ ಚೆಲುವರಾಜನ್, ಸಂಗೀತ ಸಂಯೋಜಕ ಗಗನ್ ಬತೇರಿಯಾ ಎಲ್ಲರೂ ಪ್ರತಿಭಾವಂತರು. ಆದರೆ ಹೊಸ ರೀತಿಯಲ್ಲಿ ಕೆಲಸ ಮಾಡಬಲ್ಲವರು. ನಾನು ಮತ್ತು ನಾಯಕನಟ ವಿಹಾನ್ ಅವರಿಗಂತೂ ನಮ್ಮ ವೃತ್ತಿಜೀವನದ ಮುಖ್ಯ ಸಿನಿಮಾ ಇದು. ಹೀಗೆ ಎಲ್ಲರೂ ಹೆಗಲೆಣೆಯಾಗಿ ನಿಂತ ಒಟ್ಟಿಗೆ ಕಾಣುತ್ತಿರುವ ಸುಂದರ ಕನಸಿದು. ಈ ಕಾರಣಕ್ಕಾಗಿಯೇ ಈ ಸಿನಿಮಾದಲ್ಲಿ ಕೆಲಸ ಮಾಡುತ್ತಿರುವುದು ನನಗೆ ತುಂಬ ಖುಷಿ ಕೊಟ್ಟಿದೆ’ ಎಂದು ಉತ್ಸಾಹದಿಂದ ಹೇಳುವ ಅಂಕಿತಾಗೆ ಈ ಸಿನಿಮಾ ಗೆದ್ದೇ ಗೆಲ್ಲುತ್ತದೆ ಎಂಬ ವಿಶ್ವಾಸವೂ ಇದೆ.

‘ಇಬ್ಬನಿ ತಬ್ಬಿದ ಇಳೆಯಲಿ’ ಸಿನಿಮಾದಲ್ಲಿ ಅಂಕಿತಾ ಕವಿಯಾಗಿ ಕಾಣಿಸಿಕೊಂಡಿದ್ದರೆ, ಮಯೂರ ರಾಘವೇಂದ್ರ ನಿರ್ದೇಶನದ ‘ಅಬಜಬದಬ’ ಸಿನಿಮಾದಲ್ಲಿ ಗಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ‘ನನ್ನ ಮೊದಲ ಎರಡೂ ಸಿನಿಮಾಗಳಲ್ಲಿ ಕಲೆಗೆ ಸಂಬಂಧಿಸಿದ ಪಾತ್ರದಲ್ಲಿಯೇ ಕಾಣಿಸಿಕೊಂಡಿರುವುದು ಅವರಿಗೆ ಸಾಕಷ್ಟು ತೃಪ್ತಿಯನ್ನೂ ಕೊಟ್ಟಿದೆ.

‘ನನ್ನ ಪಾಲಿಗೆ ಇದು ಶುಭಾರಂಭ. ಈ ಖುಷಿ ಮುಂದೆಯೂ ಹೆಚ್ಚುತ್ತ ಹೋಗುತ್ತದೆ ಎಂಬ ನಂಬಿಕೆ ಇದೆ’ ಎಂದು ಹೇಳುವ ಅಂಕಿತಾ ಸದ್ಯಕ್ಕೆ ತೆರೆಯ ಮೇಲೆ ಕವಯಿತ್ರಿಯಾಗುವುದಕ್ಕೆ ಮಾನಸಿಕವಾಗಿ ಸಿದ್ಧರಾಗುತ್ತಿದ್ದಾರೆ. ■

# ಶಿವರಾಜ್-ನಯನಾ ಧಮಾಕ!

‘ಕಾಮಿಡಿ ಕಿಲಾಡಿಗಳು’ ಕಿರುತೆರೆಯ ಜನಪ್ರಿಯ ಹಾಸ್ಯ ಕಾರ್ಯಕ್ರಮ. ಅದರಿಂದ ಬೆಳಕಿಗೆ ಬಂದ ಅನೇಕ ಕಲಾವಿದರು ಚಿತ್ರರಂಗದಲ್ಲಿ ತಾವು ಪಡೆದುಕೊಳ್ಳುತ್ತಿದ್ದಾರೆ. ಶಿವರಾಜ್ ಕೆ.ಆರ್.ಪೇಟೆ ಮತ್ತು ನಯನಾ ಕೂಡ ಅದೇ ವೇದಿಕೆಯಿಂದ ಜನಪ್ರಿಯತೆ ಗಳಿಸಿಕೊಂಡವರು. ಆ ಇಬ್ಬರೂ ಈಗ ಒಂದೇ ಸಿನಿಮಾದಲ್ಲಿ ನಟಿಸಿದ ‘ಧಮಾಕ’ ಮಾಡುತ್ತಿದ್ದಾರೆ. ಅಂದಹಾಗೆ ಸಿನಿಮಾ ಹೆಸರೇ ಧಮಾಕ!

ಶಿವರಾಜ್ ಮತ್ತು ನಯನಾ ಒಟ್ಟಿಗೆ ನಟಿಸುತ್ತಿದ್ದಾರೆ ಎಂದಮೇಲೆ ಯಾವ ರೀತಿಯ ಸಿನಿಮಾ ಎಂದು ಹೇಳಬೇಕಾದ ಅಗತ್ಯವೇ ಇಲ್ಲವಷ್ಟೆ. ಹಾಸ್ಯವೇ ಈ ಚಿತ್ರದ ಹಾರ್ಟು. ಜೊತೆಗೆ ಕೌಟುಂಬಿಕ ಚೌಕಟ್ಟಿನಲ್ಲಿ ನಡೆಯುವ ಹಲವು ಭಾವನಾತ್ಮಕ ಸನ್ನಿವೇಶಗಳೂ ಇವೆಯಂತೆ. ನಗುವಾಗ ನಕ್ಕಮೇಲೆ ಅಳುವಾಗ ಅಳಲೇಬೇಕಲ್ಲವೇ?



ಇವರಿಬ್ಬರೇ ಅಲ್ಲದೆ, ಪ್ರೇಕ್ಷಕರನ್ನು ನಕ್ಕು ನಗಿಸಲು ಕಲಾವಿದರ ದೊಡ್ಡ ಬಳಗವೇ ಸಿದ್ಧವಾಗಿದೆ. ಮೋಹನ್ ಜುನೇಜಾ, ಕೋಟೆ ಪ್ರಭಾಕರ್, ಮಿಮಿಕ್ರಿ ಗೋಪಾಲ್, ಅರುಣಾ ಬಾಲರಾಜ್ ಮುಂತಾದವರು ಕಲಾವಿದರ ದಂಡಿನಲ್ಲಿದ್ದಾರೆ. ಈಗಾಗಲೇ ಚಿತ್ರದ ಹಾಡು ಮತ್ತು ಟೀಸರ್ ಬಿಡುಗಡೆಯಾಗಿದ್ದು, ಜನರಿಂದ ದೊರೆಯುತ್ತಿರುವ ಪ್ರತಿಸ್ಪಂದನ ಚಿತ್ರತಂಡದ ವಿಶ್ವಾಸ ಉತ್ಸಾಹ ಎರಡನ್ನೂ ಇಮ್ಮಡಿಗೊಳಿಸಿದೆ.

ಈ ಸಿನಿಮಾವನ್ನು ಸುನೀಲ್ ಎಸ್. ರಾಜ್ ಮತ್ತು ಅನ್ನಪೂರ್ಣ ಪಾಟೀಲ ಅವರು ನಿರ್ಮಾಣ ಮಾಡಿದ್ದಾರೆ. ಲಕ್ಷ್ಮೀ ರಮೇಶ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಹಾಲೇಶ್ ಎಸ್. ಛಾಯಾಗ್ರಹಣ, ವಿಕಾಸ್ ವಸಿಷ್ಠ ಸಂಗೀತ ಚಿತ್ರಕ್ಕಿದೆ. ■